**ದಿನಾಂಕಃ 13-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವೆರದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ವಿ.ಎಂ. ವಕೀಲರಿಂದಃ**

ದಿಃ 26-08-2020 ರಿಂದ ದಿಃ 04-09-2020 ರವರೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದು ಕೊಂಡು ಬಿಡುಗಡೆ ಹೊಂದಿದ್ದೇನೆ ಎನ್ನುವ ಬಗ್ಗೆ ಡಿಸಚಾರ್ಜ ಸಮರಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-15 ಎಂದು ಗುರುತಿಸಲಾಯಿತು.

ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ಕೊಂಡಿದ್ದೇನೆ ಎನ್ನುವ ಬಗ್ಗೆ ರಶೀದಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-16 ಎಂದು ಗುರುತಿಸಲಾಯಿತು.

ರಾಣೇಬೆನ್ನೂರು ತಾಲ್ಲೂಕಿನ ಹುಲಿಹಳ್ಳಿಯಲ್ಲಿರುವ ಕೆನರಾ ಬ್ಯಾಂಕ್ ನಲ್ಲಿ ನನಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ನನ್ನ ಪಾಸ್ ಬುಕ್‌ನ ನೋಟರಾಜ್ಡ ಪ್ರತಿಯನ್ನು (ಮೂಲ

ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–17 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ವಕೀಲರಾದ ಶ್ರೀ ಎನ್.ಡಿ. ವಕೀಲರು ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.